ಆದರೆ ಶ್ರೀಪಾದರಿಗೆ ಇತ್ತ ಗಮನವೇ ಕಡಿಮೆ. ಅವಸರದಿಂದ, "ನೀವು ಹೊರಗೆಲ್ಲಾ ನೋಡಕೋರಿ. ಇಲ್ಲೆ ಭಟ್ಟರ ಮುಂದ ಹೆಚ್ಚು ಕಡಿಮ್ಯಾದ್ರ ತ್ರಾಸು" ಎಂದು ಕಳಿಸಿಬಿಡುವದಿತ್ತು. ದೇಹದಲ್ಲಿನ್ನೂ ಶಕ್ತಿ, ಉತ್ಸಾಹಗಳು ತುಂಬಿದ ಹೊತ್ತು. ಭಾವ, ಭಕ್ತಿಗಳು ತುಂಬಿ ಹರಿಯುತ್ತಿದ್ದವು. ಕ್ರಮೇಣ ಇಬ್ಬರೂ ಪತ್ನಿಯರೊಂದಿಗೆ ಬಂದು ಮಡಿ ಉಟ್ಟು ನಿಲ್ಲುತ್ತಿದ್ದರು. "ಕಾಕಾ, ಪೂಜೆಗೆ ಬರೋಣೇನು?" ಎಂದು ಕೇಳುತ್ತ ಪೂಜೆ ಮಾಡುವ ಇಚ್ಛೆ ವ್ಯಕ್ತಪಡಿಸುತ್ತಿದ್ದರು. ಶ್ರೀಪಾದರು ಇತ್ತ ನೋಡಿದರೆ ತಾನೇ. ಎಲ್ಲ ಮುಗಿಸುವವರೆಗೆ ಧಾವಂತವೇ. ಕ್ರಮೇಣ ತಮ್ಮ ತಮ್ಮ ಸಂಸಾರಗಳಲ್ಲಿ ಮುಳುಗಿದವರು ಬರುವದನ್ನೇ ನಿಲ್ಲಿಸಿದರು.

ಸುನಿತಾಳ ಮದುವೆಯಾದಷ್ಟು ಸುಲಭವಾಗಿ ಸಾಧಾರಣ ರೂಪಿನ ಅನಿತಾಳ ಮದುವೆಯಾಗಲಿಲ್ಲ. ಹುಡುಕಾಟದಿಂದ ಬಳಲಿದರೂ ಕಡೆಗೆ ಗುರುಗಳ ದಯದಿಂದ ಒಳ್ಳೆಯ ವರನೇ ದೊರಕಿದ. ಬೆಂಗಳೂರಿನಲ್ಲಿ ಎಂಜಿನಿಯರ್ ಆಗಿದ್ದ ನಾಗೇಂದ್ರ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ವಿಜೃಂಭಣೆಯಿಂದ ಮದುವೆಯಾಯಿತು. ಅವಳಿಗೂ ಬೆಂಗಳೂರಿನ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಉದ್ಯೋಗ ದೊರಕಿತು. ಮುಂದೆರಡೇ ವರ್ಷಗಳಲ್ಲಿ ಗುರುನಾಥನ ಮದುವೆಯನ್ನೂ ಮಾಡಿ ಶ್ರೀಪಾದರು ತಮ್ಮ ಹೊಣೆಗಳಿಂದ ಮುಕ್ತರಾದರು. ಗುರುಸೇವೆಯಲ್ಲಿ ನಿರತರಾದರು.

ಆದರೆ ಕಾಲ ತನ್ನ ಕೆಲಸ ಮರೆಯಲಿಲ್ಲ. ಹದಿನೈದು ವರ್ಷ ದಾಂಗುಡಿ ಇಟ್ಟು ಮುಂದೆ ಹೋಗಿದೆ. ಸುನಿತಾಳ ಮಕ್ಕಳು ಕಾಲೇಜು ಓದುತ್ತಿದ್ದಾರೆ. ಅನಿತಾಳ ಮಗ ಆಕಾಶ ಹೈಸ್ಕೂಲಿಗೆ ಬರುತ್ತಿದ್ದಾನೆ. ಶ್ರೀಪಾದರ ಶಕ್ತಿ ಕುಂಠಿತವಾಗಿದೆ. ವಯಸ್ಸು ಎಪ್ಪತ್ತು ದಾಟಿದೆ. ಕಿವಿ, ಕಣ್ಣು ಕೈಕೊಡುತ್ತಿವೆ. ವೇದಾಳಿಗೆ ಕಾಲುನೋವು. ಸೊಂಟದ ತೊಂದರೆ. ಮೊದಲಿನಂತೆ ನವರಾತ್ರಿಯ ಉತ್ಸವಕ್ಕೆ ಬಳಗ ಸೇರುತ್ತಿಲ್ಲ. ಅಡಿಗೆ ಕೆಲಸವನ್ನೆಲ್ಲ ಕಾಂಟ್ರಾಕ್ಟ್ ಕೊಟ್ಟರೂ ಸುತ್ತುಗೆಲಸವನ್ನೇ ನಿಭಾಯಿಸಲಾಗುತ್ತಿಲ್ಲ. ಸುನಿತಾ ಅಮೆರಿಕಕ್ಕೆ ಬನ್ನಿ ಎಂದು ಕರೆಯುತ್ತಲೇ ಇದ್ದರೂ ದಂಪತಿಗೆ ಹೋಗಲು ಸಾಧ್ಯವಾಗಿಲ್ಲ. ಇತ್ತೀಚೆಗೆ ಶ್ರೀಪಾದರಿಗೆ ದತ್ತಪ್ಪನ ಚಿಂತೆ ಕಾಡುತ್ತಿದೆ. ತಮ್ಮ ನಂತರ ದತ್ತೋಪಾಸನೆಯನ್ನು ಮುಂದುವರೆಸಿಕೊಂಡು ಹೋಗುವವರು ಯಾರು ಎಂಬುದೇ ಯಕ್ಷಪ್ರಶ್ನೆಯಾಗಿದೆ. ಅದಕ್ಕೆ ಸುನಿತಾ, "ಕೈಲಾಗೋವಷ್ಟು ದಿವ್ಸ ಛಂದಾಗಿ ಮಾಡೀರಿ. ಇನ್ನ ಕೈ ಮುಗದು ಯಾರಿಗೆ ಕೊಡ್ತೀರೋ, ದಾಟಸ್ತೀರೋ ನೋಡ್ರಿ" ಎಂದು ಹೇಳಿದಾಗ ಹೃದಯಕ್ಕೇ ಮುಳ್ಳು ಚುಚ್ಚಿದಂತಾಗುತ್ತದೆ. ವೇದಾ ಮತ್ತೆ ಇಬ್ಬರ ಮಧ್ಯೆ ಸೇತುವೆಯಾಗುತ್ತ, "ಖರೇಂದ್ರ ವಂಶ ಪಾರಂಪರ್ಯವಾಗಿ ಅವು ನಿನ್ನ ತಮ್ಮಂದ್ರಿಗೇ ಹೋಗ್ಬೇಕು" ಎಂದು ಪರಿಹಾರ ಸೂಚಿಸಿದ್ದರು. ಶ್ರೀಪಾದರಿಗೆ ಪಿಚ್ಚೆನ್ನಿಸಿತು. ದತ್ತಪ್ಪನನ್ನು ಕೊಡುವುದೆಂದರೆ ತಮ್ಮ ಅಂಗವೊಂದನ್ನು ಕಿತ್ತಿಟ್ಟಂತೆ ಭಾಸ. ಉಪಾಯವಿಲ್ಲ, ಮಕ್ಕಳು ಹೇಳಿದಂತೆ ಕೇಳಬೇಕಲ್ಲ. ಅಭಿಯಾನ ಆರಂಭವಾಯಿತು.

ಮೊದಲು ಉದಯನನ್ನೇ ಆಯ್ದುಕೊಂಡರು. ಹಿಂದೆ ಅವನಿಗೆ ದತ್ತಪ್ಪನಲ್ಲಿ ಅತೀವ ಆಸಕ್ತಿ ಇದ್ದುದನ್ನು ಅರಿತಿದ್ದರು. ಈಗ ಕೇಳಿದಾಕ್ಷಣ, "ದತ್ತಪ್ಪ ನಮ್ಮನಿಗೆ ಬರ್ತಾನಂದ್ರ ಅದಕ್ಕಿಂತ ಭಾಗ್ಯ ಬ್ಯಾರೇ ಏನದ ಕಾಕಾ?" ಎಂದು ಆನಂದಬಾಷ್ಪ ಸುರಿಸಬಹುದು ಎಂದೇ ಭಾವಿಸಿದರು. ಒಂದು ಭಾನುವಾರ ಹುಬ್ಬಳ್ಳಿಯ ಕೇಶ್ವಾಪೂರದಲ್ಲಿದ್ದ ಉದಯನ ಮನೆ ಸೇರಿದರು. ಆತ್ಮೀಯ ಸ್ವಾಗತದೊಡನೆ ಪುರಿ, ಖೀರಿನ ಭೂರಿ ಭೋಜನವಾಯಿತು. ಎಲೆ ಅಡಿಕೆ ಮೆಲ್ಲುತ್ತ ಶ್ರೀಪಾದರು "ಉದಯ, ನನಗೂ ವಯಸ್ಸಾತಪಾ. ಇಷ್ಟು ದಿವ್ಸ ದತ್ತಪ್ಪ ಮಾಡಿಸ್ಗೊಂಡ. ಇನ್ನ